# Joint Press Release of the 12th meeting of the India-Australia Joint Working Group on Counter-Terrorism

December 17, 2020

---

**ಭಾರತ–ಆಸ್ಟ್ರೇಲಿಯಾ ಜಂಟಿ ಭಯೋತ್ಪಾದನಾ ನಿಗ್ರಹ ಕಾರ್ಯ ಸಮೂಹದ 12ನೇ ಸಭೆಯ ಜಂಟಿ ಪತ್ರಿಕಾ ಪ್ರಕಟಣೆ**

ಡಿಸೆಂಬರ್ 17, 2020

ಭಾರತ–ಆಸ್ಟ್ರೇಲಿಯಾ ಜಂಟಿ ಭಯೋತ್ಪಾದನಾ ನಿಗ್ರಹ ಕಾರ್ಯನಿರತ ಗುಂಪಿನ 12ನೇ ಸಭೆ 17 ಡಿಸೆಂಬರ್ 2020 ರಂದು ವರ್ಚುಯಲ್ ರೂಪದಲ್ಲಿ ನಡೆಯಿತು. ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದಲ್ಲಿ ಭಯೋತ್ಪಾದನೆ ನಿಗ್ರಹಕ್ಕೆ ಜಂಟಿ ಕಾರ್ಯದರ್ಶಿ ಶ್ರೀ.ಮಹಾವೀರ್ ಸಿಂಗ್ವಿ ಹಾಗೂ ವಿದೇಶಾಂಗ ವ್ಯವಹಾರ ಮತ್ತು ಆಸ್ಟ್ರೇಲಿಯಾದ ವಾಣಿಜ್ಯ ಇಲಾಖೆಯ ಮಾನವೀಯ ಮತ್ತು ಕಾನ್ಸುಲರ್ ಗುಂಪಿನ ಅಂತರರಾಷ್ಟ್ರೀಯ ಭದ್ರತಾ ಉಪ ಕಾರ್ಯದರ್ಶಿ ಶ್ರೀ. ಟೋನಿ ಶೀಹನ್ ರವರು ಎರಡು ದೇಶಗಳ ನಡುವೆ ನಡೆಯುತ್ತಿರುವ ಭಯೋತ್ಪಾದನೆ ನಿಗ್ರಹದ ಬಗ್ಗೆ ಸಂಬಂಧಪಟ್ಟ ನಿಯೋಗದ ತಜ್ಞರೊಂದಿಗೆ ಮಾತನಾಡಿದರು.

4 ಜೂನ್ 2020 ರಂದು ನಡೆದ ನಾಯಕರ ವರ್ಚುಯಲ್ ಸಭೆಯಲ್ಲಿ ಪ್ರಧಾನ ಮಂತ್ರಿ ಮೋದಿ ಮತ್ತು ಮಾರಿಸನ್ ರವರು ಮಾಡಿದ ಭಾರತ ಮತ್ತು ಆಸ್ಟ್ರೇಲಿಯಾ ಗಣರಾಜ್ಯದ ಸಮಗ್ರ ಕಾರ್ಯತಂತ್ರದ ಸಹಭಾಗಿತ್ವದ ಜಂಟಿ ಹೇಳಿಕೆಯಲ್ಲಿ ಎರಡು ದೇಶಗಳು ಭಯೋತ್ಪಾದನೆಯನ್ನು ಎದುರಿಸುವಲ್ಲಿ ಸಮನ್ವಯ ಮತ್ತು ಸಹಕಾರಕ್ಕೆ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದೆ.

ಭಾರತ ಮತ್ತು ಆಸ್ಟ್ರೇಲಿಯಾ ಎಲ್ಲಾ ರೀತಿಯ ಭಯೋತ್ಪಾದನೆಯನ್ನು ಖಂಡಿಸಿವೆ ಮತ್ತು ಭಯೋತ್ಪಾದನೆಯನ್ನು ಸಮಗ್ರ ಹಾಗೂ ನಿರಂತರ ರೀತಿಯಲ್ಲಿ ಎದುರಿಸಲು ಅಂತರರಾಷ್ಟ್ರೀಯ ಸಹಕಾರವನ್ನು ಬಲಪಡಿಸುವ ಅಗತ್ಯವನ್ನು ಒತ್ತಿ ಹೇಳಿದರು. ಗಡಿಯಾಚೆಗಿನ ಭಯೋತ್ಪಾದನೆಯನ್ನು ಹರಡಲು ಭಯೋತ್ಪಾದಕ ಪ್ರಾಕ್ಸಿಗಳ ಬಳಕೆಯನ್ನು ಎರಡೂ ಕಡೆಯವರು ಖಂಡಿಸಿದರು.

ಘೋಷಿತ ಭಯೋತ್ಪಾದಕರು ಎಂದು ವಿಶ್ವಸಂಸ್ಥೆ ಎದುರಿಸುತ್ತಿರುವ ಬೆದರಿಕೆಗಳನ್ನು ಎರಡು ದೇಶಗಳು ಪರಿಶೀಲಿಸಿದವು ಹಾಗೂ ಎಲ್ಲಾ ಭಯೋತ್ಪಾದಕ ಜಾಲಗಳ ವಿರುದ್ಧ ದೃಢವಾದ ಕ್ರಮ ಕೈಗೊಳ್ಳುವ ಅಗತ್ಯವನ್ನು ಒತ್ತಿ ಹೇಳಿದರು. ಭಯೋತ್ಪಾದನೆಯನ್ನು ಎದುರಿಸುವ ಸಾಧನವಾಗಿ ಭಯೋತ್ಪಾದಕರನ್ನು ಮತ್ತು ಸಂಸ್ಥೆಗಳನ್ನು ನಿಷೇಧಿಸುವ ಬಗ್ಗೆ ಎರಡು ಪಕ್ಷಗಳು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿವೆ.

ಭಯೋತ್ಪಾದಕ ದಾಳಿಗೆ ತಮ್ಮ ನಿಯಂತ್ರಣದಲ್ಲಿರುವ ಯಾವುದೇ ಪ್ರದೇಶವನ್ನು ಬಳಸದಂತೆ ನೋಡಿಕೊಳ್ಳಲು ಮತ್ತು ಅಂತಹ ದಾಳಿಯ ದುಷ್ಕರ್ಮಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಲು ಎಲ್ಲಾ ದೇಶಗಳು ತಕ್ಷಣದ, ನಿರಂತರ, ಪರಿಶೀಲಿಸಬಹುದಾದ ಮತ್ತು ಬದಲಾಯಿಸಲಾಗದ ಕ್ರಮಗಳನ್ನು ತೆಗೆದುಕೊಳ್ಳುವ ತುರ್ತು ಅಗತ್ಯವನ್ನು ಭಾರತ ಮತ್ತು ಆಸ್ಟ್ರೇಲಿಯಾ ಒತ್ತಿಹೇಳಿದೆ. 26/11 ಮುಂಬೈ, ಪಠಾಣ್‌ಕೋಟ್ ಮತ್ತು ಪುಲ್ವಾಮಾ ಸೇರಿದಂತೆ ಭಾರತದಲ್ಲಿ ನಡೆದ ಭಯೋತ್ಪಾದಕ ದಾಳಿಯನ್ನು ಆಸ್ಟ್ರೇಲಿಯಾ ಮತ್ತೆ ಖಂಡಿಸಿತು ಹಾಗೂ ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಭಾರತದ ಜನರಿಗೆ ಮತ್ತು ಭಾರತ ಸರ್ಕಾರಕ್ಕೆ ತನ್ನ ಬೆಂಬಲವನ್ನು ಪುನರುಚ್ಚರಿಸಿತು.

ಭಾರತ ಮತ್ತು ಆಸ್ಟ್ರೇಲಿಯಾ ಭಯೋತ್ಪಾದನೆ ಮತ್ತು ಹಿಂಸಾತ್ಮಕ ಉಗ್ರವಾದವನ್ನು ಎದುರಿಸಲು, ಭಯೋತ್ಪಾದನೆಗೆ ಹಣಕಾಸಿನ ನೆರವು ನೀಡುವುದು, ಭಯೋತ್ಪಾದನೆ ಮತ್ತು ಹಿಂಸಾತ್ಮಕ ಉಗ್ರಗಾಮಿತ್ವಕ್ಕೆ ಅಂತರ್ಜಾಲ ಬಳಕೆಯನ್ನು ತಡೆಯುವುದು, ಕಾನೂನು ಜಾರಿ ಜಾರಿ, ಮಾಹಿತಿ ಹಂಚಿಕೆ ಮತ್ತು ಸಾಮರ್ಥ್ಯ ವೃದ್ಧಿ ಮುಂತಾದ ವಿವಿಧ ಕ್ಷೇತ್ರಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿವೆ. ಭಯೋತ್ಪಾದನೆಯನ್ನು ಎದುರಿಸುವಲ್ಲಿ COVID-19 ಸಾಂಕ್ರಾಮಿಕ ರೋಗವು ಎದುರಿಸುತ್ತಿರುವ ಸವಾಲುಗಳ ಬಗ್ಗೆಯೂ ಚರ್ಚಿಸಲಾಯಿತು.

ಈ ಸವಾಲುಗಳನ್ನು ಎದುರಿಸಲು ಎರಡೂ ಕಡೆಯವರು ಒಟ್ಟಾಗಿ ಕೆಲಸ ಮಾಡುವ ಬದ್ಧತೆಯನ್ನು ತೋರಿಸಿದರು ಹಾಗೂ ಭಯೋತ್ಪಾದನೆ ನಿಗ್ರಹದಲ್ಲಿ ಸಂವಾದ, ಸಹಕಾರ ಮತ್ತು ಮಾಹಿತಿ ಹಂಚಿಕೆಯಲ್ಲಿ ಸಹಕಾರವನ್ನು ಹೆಚ್ಚಿಸಲು ಆಯಾ ಪ್ರತಿರೂಪ ಏಜೆನ್ಸಿಗಳ ನಡುವೆ ಕಾರ್ಯವನ್ನು ಬಲಗೊಳಿಸುವ ಮಾರ್ಗಗಳನ್ನು ಚರ್ಚಿಸಿದರು.

ವಿಶ್ವಸಂಸ್ಥೆ, ಜಿ –20, ಜಿಸಿಟಿಎಫ್, ಎಆರ್‌ಎಫ್, ಐಒಆರ್ ಎ ಮತ್ತು ಎಫ್‌ಎಟಿಎಫ್, ಮತ್ತು ಆಸ್ಟ್ರೇಲಿಯಾ–ಭಾರತ–ಜಪಾನ್–ಅಮೆರಿಕಾ ಸಮಾಲೋಚನೆಗಳಂತಹ ಬಹುಪಕ್ಷೀಯ ವೇದಿಕೆಗಳಲ್ಲಿ ಭಯೋತ್ಪಾದನೆ ನಿಗ್ರಹದ ಸಹಕಾರವನ್ನು ಹೆಚ್ಚಿಸುವ ಮಾರ್ಗಗಳನ್ನು ಎರಡು ದೇಶಗಳು ಚರ್ಚಿಸಿದವು.

**ನವ ದೆಹಲಿ**
**ಡಿಸೆಂಬರ್ 17, 2020**

DISCLAIMER: This is an approximate translation. The original is available in English on MEA’s website and may be referred to as the official press release.